॥ ಹರಿಸರ್ವೋತ್ತಮ ॥ ॥ ಶ್ರೀ: ॥ ॥ ವಾಯುಜೀವೋತ್ತಮ ॥

॥ ಹರೇ ವಿಠಲ ॥

॥ ಶ್ರೀ ಗುರುಗೋವಿಂದ ವಿಠಲಾತ್ಮಕ ಹರಿನಾರಾಯಣ ವಿಠಲೋ ವಿಜಯತೇ ॥

॥ ಶ್ರೀ ಪುರಂದರ ದಾಸಾರ್ಯಾದಿ ಸಮಸ್ತ ಹರಿದಾಸವರ್ಯೇಭ್ಯೋನಮಃ ॥

# ಆನಂದ ನಿಲಯ ಕ್ಷೇತ್ರ

## ಶ್ರೀ ಪುರಂದರ ಆಶ್ರಮ ( ಹರಿದಾಸ ಆಧ್ಯಾತ್ಮಿಕ ಸಾಧನ ಕೇಂದ್ರ)

ದಿ.02.05.2013

## 3ನೆ ವಾರ್ಷಿಕೋತ್ಸವದ ಆಹ್ವಾನ ಪತ್ರಿಕಾ

ಭಗದ್ಭಕ್ತರಾದ ಶ್ರೀಮತಿ/ಶ್ರೀಮಾನ್________________________ ಇವರಿಗೆ ಮಾಡುವ ನಮನಗಳು/ ಆಶೀರ್ವಾದಗಳು.

ತಮಗೀಗಾಗಲೇ ತಿಳಿದಂತೆ ಆನಂದನಿಲಯಕ್ಷೇತ್ರಾಖ್ಯ ಶ್ರೀ ಪುರಂದರಾಶ್ರಮದಲ್ಲಿ ನೆಲೆಸಿರುವ ಶ್ರೀಹರಿವಾಯುಗುರುಗಳ ಪ್ರತಿಷ್ಠಾಪನೆ ಜರುಗಿ ಮೂರು ವರ್ಷಗಳು ಕಳೆದ ಪ್ರಯುಕ್ತ, ತೃತೀಯ ವಾರ್ಷಿಕೋತ್ಸವದ ಅಂಗವಾಗಿ ಈ ಕೆಳಕಾಣಿಸಿದ ಶ್ರೀಹರಿವಾಯುಗುರು ತೋಷಕ ಕಾರ್ಯಕ್ರಮಗಳು ಹಮ್ಮಿಕೊಳ್ಳಲಾಗಿದೆ.

**2–06–2013 ವೈಶಾಖ ಬಹುಳ ನವಮಿ, ರವಿವಾರದಿಂದ**

**7–06–2013 ವೈಶಾಖ ಬಹುಳ ಚತುರ್ದಶಿ ಶುಕ್ರವಾರದವರೆಗು**

**ಜ್ಞಾನಸತ್ರ:–** ಪ್ರತಿನಿತ್ಯವೂ ಸುಪ್ರಭಾತದಿಂದ ಆರಂಭಗೊಂಡ ಕಾರ್ಯಕ್ರಮಗಳು ಕ್ರಮವಾಗಿ ವ್ಯಾಸ–ದಾಸ ವಾಙ್ಮಯ ರೂಪ ಸಚ್ಛಾಸ್ತ್ರ ಪಾರಾಯಣ, ಪ್ರವಚನ, ಭಜನ, ಸಾಂಸ್ಕೃತಿಕೇತ್ಯಾದಿ ಚಟುವಟಿಕೆಗಳು ತಥಾ ಸಾಯಂಕಾಲ ದೀಪೋತ್ಸವ, ಅಷ್ಟಾವಧಾನ, ಮಹಾಮಂಗಳಾರತಿಯೊಂದಿಗೆ ಮುಕ್ತಾಯ.

**4–06–2013 ವೈಶಾಖ ಬಹುಳ ಏಕಾದಶಿ, ಮಂಗಳವಾರ**

ಏಕಾದಶಿ ಪ್ರಯುಕ್ತ ನಿತ್ಯ ಕಾರ್ಯಕ್ರಮಗಳ ಜೊತೆಗೆ ರಾತ್ರಿ ಜಾಗರೋತ್ಸವದ ಅಂಗವಾಗಿ ಭಾಗವತಪ್ರವಚನ, ಭಜನ, ಹರಿವಾಣಸೇವಾ ಇತ್ಯಾದಿ ನಡೆಯುವವು.

**6–06–2013 ವೈಶಾಖ ಬಹುಳ ತ್ರಯೋದಶಿ, ಗುರುವಾರ**

**ವಾರ್ಷಿಕೋತ್ಸವ ಸಮಾರಂಭ:–** ಕ್ಷೇತ್ರಮೂರ್ತಿಗಳಿಗೆ ವಿಶೇಷ ಅಭಿಷೇಕ, ಪೂಜಾ, ಅಲಂಕಾರ, ಮಹಾಮಂಗಳಾರತಿ ಹಾಗು ಗೋಪೂಜಾ ಸತ್ಯನಾರಾಯಣ ಪೂಜಾ ಇತ್ಯಾದಿ.

**ವಿಶೇಷ ಕಾರ್ಯಕ್ರಮ:–** ಭಕ್ತರ ಪ್ರಾರ್ಥನೆಯ ಮೇರೆಗೆ ಅತ್ಯಂತ ಅಪೂರ್ವ ಹಾಗು ಮಹತ್ವಪೂರ್ಣವಾದ ಶ್ರೀಮತ್ಸ್ವಾಪ್ನವೃಂದಾವನಾಖ್ಯಾನ ಹೋಮದ ಆರಂಭ. ತದಂಗತ್ವೇನ ಪುಣ್ಯಾಹ ಇತ್ಯಾದಿ ಕಾರ್ಯಕ್ರಮಗಳು ಮತ್ತು ವಿಶೇಷ ಪ್ರವಚನಗಳು ನಡೆಯುವವು. ಶ್ರೀಮದ್ವಾದಿರಾಜ ಗುರುಸಾರ್ವಭೌಮರ ಸ್ವಾಪ್ನಿಕ ಗ್ರಂಥವಾದ ಶೀಮತ್ಸ್ವಾಪ್ನವೃಂದಾವನಾಖ್ಯಾನದ ಪಠನ, ಪಾರಾಯಣ, ಅಧ್ಯಯನಾದಿಗಳು ಹಾಗು ಈ ಗ್ರಂಥಸ್ಥ ಶ್ಲೋಕಗಳನ್ನು ಬಳಸಿ ಸಂಪ್ರದಾಯ ಬದ್ಧವಾಗಿ ಮಾಡುವ ಹೋಮ ಪ್ರಕ್ರಿಯೆ ಹಾಗು ಅಣುವೃಂದಾವನಾಖ್ಯಾನ ಸ್ತೋತ್ರ ಪಾರಾಯಣಾದಿಗಳಿಂದ ಅಂತಃಕರಣಶುದ್ಧಿ ದ್ವಾರಾ ಸಾಧಕರ ಸತ್ಸಾಧನೆಯ ಪ್ರತಿಬಂಧಕಗಳು ತೊಲಗಿ ಕ್ರಮೇಣ

ಶ್ರೀ ಪುರಂದರ ವಿಠಲ ಸೇವಾ ಟ್ರಸ್ಟ್, ಓಂ ನಗರ್ ಪೋಸ್ಟ್–518313,
ಆದವಾನಿ–ಮಾಧವರಂ–ಮಂತ್ರಾಲಯಂ ರೋಡ್, ಕರ್ನೂಲ್ ಜಿಲ್ಲೆ, ಆಂಧ್ರಪ್ರದೇಶ.
Ph.No:08512-201073 ©: 93940-17134,93922-27850,93480-24355,93910-17137
Web site: www.sripurandaraashrama.org
e_mail:haridasa@sripurandaraashrama.org, sripurandaraashrama@gmail.com

ಗುರುಕಾರುಣ್ಯಪ್ರಾಪ್ತಿಮೂಲಕ ಸ್ವೋತ್ತಮದೇವತೆಗಳ, ವಿಶೇಷತಃ ಶ್ರೀಮದ್ವಾದಿರಾಜ ಗುರುಸಾರ್ವಭೌಮರ ಸ್ವರೂಪಮಹಿಮಾವಬೋಧಕ ಜ್ಞಾನದಲ್ಲಿ ದೀಕ್ಷೆಯುಂಟಾಗಿ ತದುಪಾಸನದ ಫಲವಾಗಿ ಬಿಂಬರೂಪಿ ಶ್ರೀಹರಿಯ ವಿಶಿಷ್ಟಾನುಗ್ರಹವಾದದ್ದು ಅನೇಕ ಜ್ಞಾನಿಗಳ ಅನುಭವದ ವಿಷಯವಾಗಿದೆಯೆಂದರೆ ಅತಿಶಯೋಕ್ತಿ ಅಲ್ಲ. ಈ ಸತ್ಯಾಂಶವನ್ನು ಸಾಧಕರು ಮನಗಂಡು ಪ್ರಾಮಾಣಿಕ ಅನುಷ್ಠಾನದ ದ್ವಾರಾ ತಮ್ಮ ಸಾಧನೆಯ ಪುರೋಗಮನವನ್ನು ಸಾಧಿಸಿಕೊಳ್ಳತಕ್ಕದ್ದು. ಇತ್ಯಾದಿ ಇನ್ನೂ ಹೆಚ್ಚಿನ ವಿಷಯಗಳನ್ನು 1. ಋಜುತ್ವದೀಕ್ಷಾದಕ್ಷರು, ವ್ಯಾಸದಾಸ ವಾಙ್ಮಯ ಪರಿಣತರು, ಉತ್ತಮ ವಿದ್ವಾಂಸರೂ ಆದ ವೇದಮೂರ್ತಿ ವಿದ್ವಾನ್ ಪೂಜ್ಯ ಶ್ರೀ ಪುಷ್ಕರಪ್ರಸಾದಾಚಾರ್ಯರು ತಿಳಿಸುವವರಿದ್ದಾರೆ. 2. ವಾದಿರಾಜರ **ಋಜುತ್ವ** ವಿಚಾರವನ್ನು ಒಂದು **ತತ್ತ್ವವನ್ನಾಗಿ** ಪರಿಗಣಿಸಿ ಆನುವಂಶಿಕವಾಗಿ ಬಂದ ಋಜುತ್ವ ದೀಕ್ಷಾಯುತರು, ಮತ್ತು ಉತ್ತಮ ಅನುಷ್ಠಾತೃಗಳೂ ಆದ ವೇದಮೂರ್ತಿ ವಿದ್ವಾನ್ ಪೂಜ್ಯ ಶ್ರೀ ಗುರುರಾಜಾಚಾರ್ಯ ನಿಪ್ಪಾಣಿ (Dr.G.K.Nippani, Bellary) ಯವರು ಸತ್ಸಂಪ್ರದಾಯಜ್ಞರಾದ ತಮ್ಮ ಬಂಧುಗಳಿಂದ ಕೂಡಿಕೊಂಡು ಅರ್ಥಾನುಸಂಧಾನ ಪುರಸ್ಸರವಾಗಿ ಆಖ್ಯಾನ ಹೋಮವನ್ನು ನಿರ್ವಹಿಸಿಕೊಡಲಿರುವುದರೊಂದಿಗೆ ಸಮಯೋಚಿತ ವಿಶಿಷ್ಟ ಪ್ರವಚನಗಳನ್ನು ನೀಡಲಿರುವುದು ನಮ್ಮ ಭಾಗ್ಯವೇ ಸರಿ (ಇನ್ನೂ ಕೆಲವು ವಿದ್ವಾಂಸರು ಜ್ಞಾನಸತ್ರದಲ್ಲಿ ತಮ್ಮ ಪಾಲ್ಗೊಳ್ಳುವಿಕೆಯನ್ನು ಖಚಿತಗೊಳಿಸುವ ನಿರೀಕ್ಷಣೆಯಲ್ಲಿದ್ದೇವೆ).

## 7–06–2013 ವೈಶಾಖ ಬಹುಳ ಚತುರ್ದಶಿ, ಶುಕ್ರವಾರ

ವಾರ್ಷಿಕೋತ್ಸವದ ದ್ವಿತೀಯ ದಿನ:– ಕ್ಷೇತ್ರಮೂರ್ತಿಗಳಿಗೆ ವಿಶೇಷ ಪೂಜಾದಿಗಳು. ಆಖ್ಯಾನಹೋಮದ ಪೂರ್ಣಾಹುತಿ.
ಸಂಜೆ:– ಪ್ರವಚನ ತಥಾ ಜ್ಞಾನಸತ್ರದ ಸಮಾರೋಪ ಸಮಾರಂಭ. ಆಶೀರ್ವಚನ, ಫಲಮಂತ್ರಾಕ್ಷತೆ ವಿತರಣೆ.

ಆರು ದಿನಗಳ ಈ ಮಹಾಸಮಾರಂಭದಲ್ಲಿ ಭಕ್ತರು ತಾವು ಸ್ವತಃ ಸಂಪೂರ್ಣ**ವಾಗಿ** ಭಾಗವಹಿಸುವುದಲ್ಲದೆ ಆಸಕ್ತಿಯುಳ್ಳ ತಮ್ಮ ಬಂಧುಮಿತ್ರರನ್ನು ಸಹ ಪಾಲ್ಗೊಳ್ಳುವಂತೆ **ಪ್ರೇರಣೆನೀಡಿ** ಶ್ರೀಹರಿವಾಯುಗುರುಗಳ ಪರಮಾನುಗ್ರಹಕ್ಕೆ ಪಾತ್ರರಾಗಲು **ಈ ಮೂಲಕ ತಮಗೆ ಹೃತ್ಪೂರ್ವಕ ಆಹ್ವಾನವನ್ನು ನೀಡುತ್ತೇವೆ.**

**ವಿಶೇಷ ಸೂಚನೆ:–** ಈ ಜ್ಞಾನಸತ್ರದ ನಿಮಿತ್ತ ಹಾಗೂ ಶ್ರೀಮತ್ಸ್ವಾಪ್ನವೃಂದಾವನಾಖ್ಯಾನ ಹೋಮದ ಉದ್ದಿಶ್ಯ ಶ್ರೀಮತ್ಸ್ವಾಪ್ನವೃಂದಾವನಾಖ್ಯಾನ ಗ್ರಂಥ ಪಾರಾಯಣ ಹಾಗೂ ಅಣುವೃಂದಾವನಾಖ್ಯಾನ ಸ್ತೋತ್ರ ಪಾರಾಯಣ ಮತ್ತು ಇತರ ಸಚ್ಛಾಸ್ತ್ರೀಯ ಗ್ರಂಥಗಳ ಪಾರಾಯಣವನ್ನು ಈ ಕ್ಷೇತ್ರಕ್ಕೆ ಬಂದು ಪಾರಾಯಣ ಗೈಯ್ಯುವವರಿಗೆ ಸಕಲ ಅನುಕೂಲಗಳು ಒದಗಿಸಲಾಗುವುದು. ಯಾವ ಸಂಕೋಚವೂ ಇಲ್ಲದೇ ಭಕ್ತರು ಸಾಧನೆ ಮಾಡಿಕೊಂಡು ಕೃತಾರ್ಥರಾಗಲು ಅಪೇಕ್ಷಿಸುತ್ತೇವೆ. ಪ್ರಕೃತ ಈ ಕಾರ್ಯಕ್ರಮದಲ್ಲಿ ತಮ್ಮ ಕಡೆಯಿಂದ ಎಷ್ಟು ಮಂದಿ ಹಾಗೂ ಎಷ್ಟು ದಿವಸ ಭಾಗವಹಿಸುವುದು ಎಂಬುದನ್ನು ಸ್ವಲ್ಪ ಮುಂಚಿತವಾಗಿ ತಿಳಿಸಿ ಸಹಕರಿಸಬೇಕಾಗಿ ವಿನಂತಿ.

ಇಲ್ಲಿಗೆ ಬರಲು ಅನುಕೂಲವಿಲ್ಲದವರು ತಮ್ಮ ಸ್ವಸ್ಥಳದಲ್ಲಿಯೇ ಇದ್ದುಕೊಂಡು ಸಂಕಲ್ಪ ಪುರಸ್ಸರ ಮೇಲೆ ತಿಳಿಸಿದಂತೆ ಪಾರಾಯಣಗೈದು, ಪಾರಾಯಣವಿವರಗಳೊಂದಿಗೆ ತಮ್ಮ ಗೋತ್ರ, ನಕ್ಷತ್ರ, ವಿಳಾಸವನ್ನು ತಿಳಿಸಿದಲ್ಲಿ ಜ್ಞಾನಸತ್ರದ ಸಮಾರೋಪ ಹಾಗೂ ಹೋಮದ ಪೂರ್ಣಾಹುತಿ ದಿವಸದಂದು [7–06–2013, ಚತುರ್ದಶಿ] ತಮ್ಮ ಈ ಸೇವೆಯನ್ನು ಕ್ಷೇತ್ರಮೂರ್ತಿಗಳ ಅಂತರ್ಯಾಮಿ ಭಗವದ್ರೂಪಗಳಿಂದ ಅಭಿನ್ನನಾದ ಶ್ರೀಮತ್ಸ್ವಾಪ್ನವೃಂದಾವನಾಖ್ಯಾನ ಗ್ರಂಥ ಪ್ರತಿಪಾದ್ಯ ತಥಾ ಹೋಮ ನಿಯಾಮಕ ಹಾಗೂ ಫಲಪ್ರದಾಯಕ ಲಾತವ್ಯಚಕ್ರವರ್ತಿ ಭಾವಿಸಮೀರ ಶ್ರೀಮದ್ವಾದಿರಾಜತೀರ್ಥ ಗುರುಸಾರ್ವಭೌಮರ ಹೃದಯಾಂತರ್ಯಾಮಿ ಲಕ್ಷ್ಮೀನೃಸಿಂಹಾಭಿನ್ನ ಭೂವರಾಹಾತ್ಮಕ ಶ್ರೀಅಶ್ವಿನೀಹಯಗ್ರೀವ ಸ್ವಾಮಿಯ ಅಡಿದಾವರೆಗಳಲ್ಲಿ ಭಕ್ತ್ಯಾ ಸಮರ್ಪಿಸಿ ತಮ್ಮ ಹಾಗೂ ಕುಟುಂಬದವರ ಶ್ರೇಯೋ ಪ್ರಾರ್ಥನೆ ಗೈದು ಅನುಗ್ರಹ ಫಲಮಂತ್ರಾಕ್ಷತೆಯೊಂದಿಗೆ ಹೋಮ ಭಸ್ಮವನ್ನು ಕಳುಹಿಸಕೊಡಲಾಗುವುದು. ಈ ಪತ್ರ ತಮಗೆ ತಲುಪಿದುದಕ್ಕೆ ಕೂಡಲೇ ದೂರವಾಣಿ ಇತ್ಯಾದಿ ಯಾವುದೇ ಮಾಧ್ಯಮ ದ್ವಾರಾ ನಮಗೆ ತಿಳಿಸಿದಲ್ಲಿ ಉಪಕೃತರಾಗುತ್ತೇವೆ.

ವಿ.ಸೂ:– ಪೂರ್ವೋಕ್ತ ಮಹತ್ತರವಾದ ಈ ಜ್ಞಾನಸತ್ರಕ್ಕೆ ಯಾವುದೇ ತರಹದ ಸೇವೆಯನ್ನು ಭಕ್ತರು ಐಚ್ಛಿಕವಾಗಿ ಯಥಾಶಕ್ತಿ ಸಲ್ಲಿಸಬಹುದು.

ಇತಿ ನಮನಗಳೊಂದಿಗೆ,

ತಮ್ಮವನಾದ,
ಹರಿದಾಸಜನ ಪಾದಪದುಮಾರಾಧಕ,

ಹರಿನಾರಾಯಣ ವಿಠಲ ದಾಸ.
ಅಧ್ಯಕ್ಷ, ಶ್ರೀಪುರಂದರ ವಿಠಲ ಸೇವಾ ಟ್ರಸ್ಟ್.